<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>
<u>ಅಫಜಲಪೂರ</u>

ಸಿಸಿ ನಂ.283/2016

ಚಾಸಾ-8 ಪ್ರಾ.ಸಾ-7

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕ: 20.02.2021

| | | |
|---|---|---|
| ಹೆಸರು | ಃ | ಮಹ್ಮದ ಅಸರಪ ಹುಸೇನ |
| ತಂದೆ ಹೆಸರು | ಃ | ಮಹ್ಮದ ಜಿಯಾವುದ್ದಿನ |
| ವಯಸ್ಸು | ಃ | 55-ವರ್ಷ |
| ಉದ್ಯೋಗ | ಃ | ಎಫ್ ಡಿ ಎ |
| ವಾಸಸ್ಥಳ | ಃ | ಕಲಬುರಗಿ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

2006 ರಿಂದ ಜಿ.ಪಂ. ಕಲಬುರಗಿಯಲ್ಲ್ ಎಫ್ ಡಿ ಎ ಎಂದು ಸೇವೆ ಸಲ್ಲಿಸುತ್ತಿದ್ದೇನೆ. 1 ನೇ ಆರೋಪಿಯನ್ನು ನೋಡಿರುತ್ತೇನೆ. ಉಳಿದ ಆರೋಪಿತರು ಗೊತ್ತಿಲ್ಲ. ಚಾಸಾ-1 ಗೊತ್ತಿಲ್ಲ. ಚಾಸಾ-7 ರವರು ಸೂಪರಡೆಂಟ್ ಇದ್ದರು, ಚಾಸಾ-9 ಮತ್ತು 10 ಪ್ರ.ದ.ಸ. ಇದ್ದರು. ಚಾಸಾ-11 ಗೊತ್ತಿಲ್ಲ. ಚಾಸಾ-12 ಮತ್ತು 13 ಸಿಎ ಆಗಿದ್ದರು. ಚಾಸಾ-1 ರವರು ನನ್ನನ್ನು ಆಡಿಟ್ ವರದಿಯಲ್ಲಿ ಅವ್ಯವಹಾರವಾಗಿದೆ ಎಂದು ಠಾಣೆಗೆ ಬರಲು ತಿಳಿಸಿದ್ದು ಅವರ ಕೋರಿಕೆಯ ಮೇರೆಗೆ ಬಂದು ಆಡಿಟ್ ಪರಿಶೀಲಿಸಿರುತ್ತೇನೆ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ವಿನಂತಿಸಿದ್ದು, ಅಭಿಯೋಜನೆ ಪರ ಇರುವ ಕಾಗದ ಪತ್ರಗಳನ್ನು ಪರಿಶೀಲಿಸಿ ಪಾಟಿ ಸವಾಲಿಗೆ ಅನುಮತಿಸಲಾಯಿತು.)

ಪಾಟಿ ಸವಾಲು: ಎಪಿಪಿ ಯವರಿಂದ

ಗೌರ ಬಿ ಗ್ರಾ.ಪಂ. ಸಂಬಂಧಿಸಿದ ಲೆಕ್ಕ ಪರಿಶೋಧನೆ, ಚಾಸಾ-7 ರವರ ಸಹಾಯಕನಾಗಿ ನಾನು, ಚಾಸಾ-9 ರಿಂದ 13 ರವರು ಲೆಕ್ಕಪರಿಶೋಧನೆ ದಿನಾಂಕ 27.12.2014 ರಂದು ಚಾಸಾ-1 ರವರಿಗೆ ಗೌರ ಬಿ. ಗ್ರಾ.ಪಂ. ನ ಲೆಕ್ಕಪರಿಶೋಧನೆ ವರದಿಯನ್ನು ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ಸದರಿ ಗ್ರಾಮದ 43 ಕಾಮಗಾರಿಗಳ ಕಡತಗಳನ್ನು ಲೆಕ್ಕಪರಿಶೋಧನೆಗೆ ಲಭ್ಯವಾಗಿದ್ದು ಸದರಿ 43 ಕಡತಗಳನ್ನು ಪರಿಶೀಲಿಸಿ ಲೆಕ್ಕಪರಿಶೋಧನೆ ವರದಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಇನ್ನುಳಿದ 100 ಕಾಮಗಾರಿಗಳ ಕಡತಗಳು ತನಿಖಾ ತಂಡಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

2013-14 ನೇ ಸಾಲಿನ ಕ್ರಿಯಾ ಯೋಜನೆ ತಯಾರಿಸಿದ್ದು ಒಟ್ಟು 368 ಕಾಮಗಾರಿಗಳ ಒಟ್ಟು ಮೊತ್ತ ರೂ.5,62,46,000/- ಗಳ ಕ್ರಿಯಾ ಯೋಜನೆ ತಯಾರಿಸಿ ಜಿ.ಪಂ. ಮೇಲಾಧಿಕಾರಿಯವರ ಅನುಮೋದನೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

ಕಿರ್ದಿ ಪುಸ್ತಕದಲ್ಲಿ ಗೌರ ಬಿ. ಗ್ರಾ.ಪಂ.ಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳ ಹಣಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಕಿರ್ದಿ ಪುಸ್ತಕದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ.

ಕ್ರಿಯಾ ಯೋಜನೆಯ ಅನುಸಾರ ಒಟ್ಟು 368 ಕಾಮಗಾರಿಗಳನು ಅನುಷ್ಟಾನಕ್ಕೆ ನಿಗದಿಪಡಿಸಿಕೊಂಡಿದ್ದು ಇದರಲ್ಲಿ 320 ಕಾಮಗಾರಿಗಳು MIS ನಲ್ಲಿ ಅಳವಡಿಸಿದ್ದು ಇವುಗಳಲ್ಲಿ 153 ಕಾಮಗಾರಿಗಳಿಗೆ ಹಣ ಪಾವತಿ ಮಾಡಿದ್ದು ಕಂಡುಬರುತ್ತದೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ವಶಪಡಿಸಿಕೊಂಡ 75 ಕಡತಗಳನ್ನು ಪರಿಶೀಲಿಸಿದಾಗ ಅವುಗಳಲ್ಲಿ 43 ಕಡತಗಳು ಗೌರ ಬಿ. ಗ್ರಾ.ಪಂ.ದಿಂದ ಅನುಷ್ಟಾನಗೊಳಿಸಿದ MGNREGA ಯೋಜನೆಗೆ ಸಂಬಂಧಿಸಿದ್ದು ಸದರಿ 43 ಕಡತಗಳಲ್ಲಿ ಕೂಲಿಗಾಗಿ ಪಾವತಿಸಿದ NMR ಗಳಲ್ಲಿ 22 ಕಾಮಗಾರಿಗಳ

ಕಡತಗಳಲ್ಲಿ ಕೂಲಿ ಕಾರ್ಮಿಕರ ಸಹಿಯಿಲ್ಲದ ಮತ್ತು ಒಂದೇ ತರಹದ ಹೆಬ್ಬೆಟ್ಟಿನ ಗುರುತುಗಳೆಂದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ಅವುಗಳ ಒಟ್ಟು ಮೊತ್ತ ರೂ.18,12,179/- ಎಂದರೆ ಸರಿಯಲ್ಲ.

NMR ನಲ್ಲಿ ಕೂಲಿಗಾರರ ಸಹಿಯಿಲ್ಲದೇ ಹಣ ಪಾವತಿಸಿರುವ ಬಗ್ಗೆ 43 ಕಡತಗಳನ್ನು ಪರಿಶೀಲಿಸಿದಾಗ ಸದರಿ ಯೋಜನೆಯ ಕಾಮಗಾರಿಗಳಿಗೆ ಕೂಲಿಗಾಗಿ ಹಣ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ಆದರೆ NMR ನಲ್ಲಿ ಕೂಲಿದಾರರಿಂದ ಸಹಿ ಪಡೆಯದೇ ರೂ.3,22,804/- ಗಳನ್ನು ವಿವಿಧ ಕಾಮಗಾರಿಗಳ ಕೊಡನಲ್ಲಿ ವಿವಿಧ ಮೊತ್ತಗಳನ್ನು ಪಾವತಿಸಿರುವುದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ.

ಸದರಿ ಯೋಜನೆಯ 43 ಕಡತಗಳನ್ನು ಪರಿಶೀಲಿಸಿದಾಗ ಕಾಮಗಾರಿಗಳಿಗಾಗಿ ಸರಬರಾಜಿಸಿದ ಸಾಮಗ್ರಿಗಳನ್ನು ನಮೂನೆ-32 ರಲ್ಲಿ ನಮೂದಿಸಿದ್ದು 43 ಕಡತಗಳ ಪೈಕಿ 10 ಕಡತಗಳಿಗೆ ಸಂಬಂಧಿಸಿದಂತೆ MIS ನಲ್ಲಿ ರೂ.18,35,475/- ಗಳ ಹಣ ಸಂದಾಯ ಮಾಡಿದ ಬಗ್ಗೆ ಕಂಡು ಬಂದಿದ್ದು ಅವುಗಳಿಗೆ ಸಂಬಂಧಿಸಿದ ಯಾವುದೇ ಒಚರಗಳು ಇರುವುದಿಲ್ಲ ಎಂದರೆ ಸರಿಯಲ್ಲ.

PKGB Bank, Afzalpur A/c. No.11020100007244 ಇದ್ದು ಸದರಿ ಖಾತೆ ಪರಿಶೀಲಿಸಲಾಗಿ ದಿನಾಂಕ 01.04.2013 ರಿಂದ 22.11.2014 ರವರೆಗೆ ಕಾಮಗಾರಿಗಾಗಿ ಒಟ್ಟು ರೂ.4,92,491/- ಗಳನ್ನು ವೆಚ್ಚ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ವೆಚ್ಚದ ದಾಖಲೆಗಳನ್ನು ಪರಿಶೀಲನೆಗೆ ಹಾಜರುಪಡಿಸದೇ ಇದ್ದುದರಿಂದ ರೂ.4,92,491/- ಗಳ ಸರಕಾರದ ಸುತ್ತೋಲೆ ದಿನಾಂಕ 18.04.2007 ರ ಪ್ರಕಾರ ವಸೂಲಾತಿಗೆ ಸೂಚಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ಕಾಮಗಾರಿಗಳು ನಿರ್ವಹಿಸಿದ ಬಗ್ಗೆ ಹಂತ ಹಂತವಾಗಿ ಮೂರು ಪೋಟೊಗಳನ್ನು ಲಗತ್ತಿಸಬೇಕಾಗಿದ್ದು ಎರಡು ಪೋಟೊ ಕೆಲವು ಕಡತಗಳಲ್ಲಿ

ಯಾವುದೇ ಫೋಟೊ ಅಂಟಿಸಿರುವುದಿಲ್ಲ ಎಂದರೆ ಸರಿಯಲ್ಲ. ಫೋಟೊಗಳಿಗೆ ಸಂಬಂಧಪಟ್ಟ ಅಧಿಕಾರಿಗಳಿಂದ ದೃಡೀಕರಣ ಪಡೆಯದೇ ಲಗತ್ತಿಸಿರುವುದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ.

2013-14 ಮತ್ತು 2014-15 ನೇ ಸಾಲಿನ IMS ತಖ್ತೆ ಪ್ರಕಾರ 153 ಕಾಮಗಾರಿಗಳಿಗೆ ಕೂಲಿಗಾಗಿ ಮತ್ತು ಸಾಮಗ್ರಿಗಳಿಗಾಗಿ ಹಣ ಪಾವತಿಸಿರುವುದು ಕಂಡುಬರುತ್ತದೆ ಎಂದರೆ ಸರಿಯಲ್ಲ. ಇದರಲ್ಲಿ 111 ಕಾಮಗಾರಿಗಳಿಗಾಗಿ ಉಮೇಶ ಕಲ್ಲಪ್ಪ ರವರಿಗೆ ರೂ.2,56,04,652/- ಗಳನ್ನು 5 ನೇ ಆರೋಪಿತನಿಗೆ ರೂ.1,48,08,000/- ಗಳನ್ನು, 7 ನೇ ಆರೋಪಿಗೆ ರೂ.47,20,595/- ಗಳನ್ನು, 6 ನೇ ಆರೋಪಿಗೆ ರೂ.17,77,509/- ಗಳನ್ನು, 9 ನೇ ಆರೋಪಿಗೆ ರೂ.13,27,932/- ಗಳನ್ನು, ಮೋಶಿನ ಪಟೇಲ್ ಇವರಿಗೆ ರೂ.8,67,812/- ಗಳನ್ನು, 4 ನೇ ಆರೋಪಿತನಿಗೆ ರೂ.6,78,635/- ಗಳನ್ನು, 8 ನೇ ಆರೋಪಿಗೆ ರೂ.6,32,292/- ಗಳನ್ನು, ಪಟೇಲ್ ಸಿಮೆಂಟ್‌ಗೆ ರೂ.92,892/- ಗಳನ್ನು ಪವಾತಿಸಿರುವುದು ಕಂಡಬರುತ್ತದೆ ಎಂದರೆ ಸರಿಯಲ್ಲ. ಮೇಲ್ಕಂಡವರ ಪೈಕಿ 4, 5, 7 ನೇ ಆರೋಪಿತರಿಗೆ ಕಾಮಗಾರಿಯ ಸಾಮಗ್ರಿಗಾಗಿ ಹಣ ಪಾವತಿಸಿದ್ದು ಅಂದಾಜು ಮೊತ್ತಕ್ಕಿಂತ ಹೆಚ್ಚಿಗೆ ಪಾವತಿಸಿದ್ದು ಕಂಡುಬಂದಿದ್ದು ಸಂಬಂಧಪಟ್ಟ ಅಧಿಕಾರಿಗಳಿಂದ ಪರಿಷ್ಕೃತ ಅನುಮೋದನೆ ಪಡೆದುಕೊಂಡ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

MIS ಪ್ರಕಾರ ಸದರಿ ಯೊಜನೆಯಲ್ಲಿ 2013-14, 2014-15 ಸಾಲಿನಲ್ಲಿ ಒಟ್ಟು 153 ಕಾಮಗಾರಿಗಳಿಗೆ ಹಣ ಪಾವತಿಸಿದ್ದು ಅವುಗಳ ಪೈಕಿ 132 ಕಾಮಗಾರಿಗಳ ಬಗ್ಗೆ MIS ನಲ್ಲಿ ಫೀಡ್ ಆಗಿರುತ್ತದೆ ಎಂದರೆ ಸರಿಯಲ್ಲ. ಅವುಗಳ ಪೈಕಿ 43 ಕಾಮಗಾರಿಗಳ ಕಡತಗಳು ಲಬ್ಯವಿದ್ದು ಅವುಗಳಲ್ಲಿ 21 ಕಡತಗಳ ಬಗ್ಗೆ MIS ನಲ್ಲಿ ಫೀಡ್ ಮಾಡಿದ್ದು 22 ಕಾಮಗಾರಿಗಳ ಕಡತಗಳ ಬಗ್ಗೆ MIS ನಲ್ಲಿ ಪೀಡ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಇನ್ನುಳಿದ 110 ಕಾಮಗಾರಿಗಳ ಕಡತಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ

ಕಾಮಗಾರಿಗಳಿಗೆ ಪಾವತಿಸಿದ ಒಚರಗಳನ್ನು ಹಾಜರುಪಡಿಸದೇ ರೂ.5,19,03,853/- ಹಣವನ್ನು ಆರೋಪಿತರು ಸ್ವಂತಕ್ಕೆ ಉಪಯೋಗಿಸಿಕೊಂಡು ಮೋಸ ಮಾಡಿದ ಬಗ್ಗೆ ಆಡಿಟ್ ವರದಿಯಿಂದ ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ಇನ್ನುಳಿದ 110 ಕಡತಗಳನ್ನು ತನಿಖೆಗೆ ಹಾಜರುಪಡಿಸದೆ ಕಳ್ಳತನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹೀಗೆ 153 ಕಾಮಗಾರಿಗಳಿಗೆ ಸಂಬಂಧಿಸಿದ ಸರಕಾರಿ ಹಣ ರೂ.5,19,03,853/- ಗಳನ್ನು ಸ್ವಂತಕ್ಕೆ ಉಪಯೋಗಿಸಿಕೊಂಡು ಸರಕಾರಕ್ಕೆ ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ತಾಂತ್ರಿಕ ತಂಡದವರ ಪರಿಶೀಲನೆ ನಂತರ ಕಾಮಗಾರಿಗಳಿಗೆ ಅಂದಾಜು ಪತ್ರಿಕೆಯಲ್ಲಿ ನಿಗದಿಪಡಿಸಿದಂತೆ ಸಾಮಗ್ರಿ ಬಾಬ್ತು 2014 ರಲ್ಲಿ ಮೋಸಿನ ಅಹ್ಮದ ಪಟೇಲ ರವರಿಗೆ ಹಣ ಪಾವತಿಯಾಗಿದ್ದು ಹಾಗೂ ಕಾಮಗಾರಿಗಳನ್ನು ಅಂದಾಜು ಪತ್ರಿಕೆ ಪ್ರಕಾರ ಪೂರ್ಣಗೊಳಿಸಿರುವ ಬಗ್ಗೆ ತಾಂತ್ರಿಕ ತಂಡದಿಂದ ಪರಿಶೀಲಿಸಿದ ನಂತರ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಸೊನ್ನ ಮೇನ್ ರೊಡದಿಂ ಸೋಹೆಲ ಪಟೆಲ ರವರ ಹೊಲದವರೆಗೆ ಮುರುಮ ರಸ್ತೆ ಮತ್ತು ಸೊನ್ನ ನಾಗಪ್ಪ ಬಸಣ್ಣ ಕಿಣಗಿ ಹೊಲದಿಂದ ಶಿವಪುತ್ರ ಕಿಣಗಿ ರವರ ಹೊಲದವರೆಗೆ ಕಾಮಗಾರಿಗೆ ಸಂಬಂಧಿಸಿದಂತೆ ಪುನಃ ಸುಳ್ಳು ಬಿಲ್ಲುಗಳನ್ನು ತಯಾರಿಸಿ 5 ನೇ ಆರೋಪಿ ಅವರ ಖಾತೆಗೆ ದಿನಾಂಕ 02.09.2014 ರೂ.33,88,000/- ಗಳನ್ನು ನಿಯಮಬಾಹಿರವಾಗಿ ಪಾವತಿಸಿರುತ್ತಾರೆಂದರೆ ಸರಿಯಲ್ಲ. ಆರೋಪಿತರೆಲ್ಲರೂ ಸೇರಿ MGNREGA ನೇದ್ದರಡಿಯಲ್ಲಿನ 110 ಕಡತಗಳನ್ನು ಕಳ್ಳತನ ಮಾಡಿ ಕಾಮಗಾರಿಗಳನ್ನು ಪೂರ್ತಿಗೊಳಿಸದೇ ರೂ.5,19,03,853/- ಗಳನ್ನು ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡು ಸರಕಾರದ ಹಣವನ್ನು ದುರುಪಯೋಗಪಡಿಸಿಕೊಂಡು ಸರಕಾರಕ್ಕೆ ವಂಚನೆ ಹಾಗೂ ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಘಟನೆ ಕುರಿತು ಈಗ ಓದಿ ಹೇಳಲಾದ ನಿಪಿ-14 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಘಟನೆ ಬಗ್ಗೆ ಮಾಹಿತಿಯಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಇಲ್ಲ.
ಮರು ವಿಚಾರಣೆಃ ಇಲ್ಲ.
(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ